ಶ್ರೀ ಬಿ. ಎಕ್. ಬೋರಣ್ಣಗೌಡ.—ಅಲ್ಲಿ ಮೂರು ಮೈಲಿಯ ಹತ್ತಿರದಲ್ಲೇ ಅನೇಕ ಇರಿಗೇಷ್ಟ್ ಪಂಪುಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿಲ್ಲವೇ ?

ಡಾ॥ ಆರ್. ನಾಗನಗೌಡ.—ರಿಟರ್ನ್ಸ್ ನರಿಯಾಗಿ ಬರುತ್ತದೆಯೇ ಎಂದು ನೋಡಬೇಕು.

ಶ್ರೀ ಬಿ. ಎಕ್. ಬೋರಣ್ಣಗೌಡ.—ರೆವೆನ್ಯೂ ರಿಟರ್ನ್ಸ್ ಬರುತ್ತದೆಂದು ಕಂಡುಬಂದರೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಆಗಲಿ.

ಶ್ರೀ ಎಸ್. ಸಿದ್ದಪ್ಪ.—ಇವರುಗಳೆಲ್ಲಾ ಪಂಪುಗಳಿಗೆ ಹಣವನ್ನು ಕೊಟ್ಟಿದ್ದಾರಲ್ಲವೇ ?

ಡಾ॥ ಆರ್. ನಾಗನಗೌಡ.—ಕೊಟ್ಟಿದ್ದ ಹಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಇನ್ನೂ ಹಣವನ್ನು ಕೊಟ್ಟಿದ್ದವರಿಗನ್ನೇಕಿರಿಗೆ ತಾವು ಪಂಪುಸೆಟ್ಟುಗಳನ್ನು ಕೊಟ್ಟಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

Electric power in Devanahalli Taluk (Conversion of Frequency).

Q.—345. Sri K. V. BYRE GOWDA (Bangalore North).—

Will the Government be pleased to state :—

(*a*) whether they are aware that a number of estimates for grant of electric power both for lighting purpose and for supply of power to irrigation pump sets are kept pending in Devanahalli Taluk on account of inadequate capacity of the 25 cycles line in that taluk ;

(*b*) the steps they have taken for the conversion of this line into 50 cycles ?

A.—Dr. R. NAGAN GOWDA (Minister for Agriculture).—

(*a*) No.

(*b*) Necessary data required for the conversion of the frequency in the area are being collected and the work will be taken up after preparing the estimates, etc.

ಶ್ರೀ ಕೆ. ವಿ. ಬೈರೇಗೌಡ.—ಇಲ್ಲಿ ತಾವು (ಎ) ಪ್ರಶ್ನೆಗೆ—'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಈಗ ಅಲ್ಲಿ ಹಾಕಲಾಗಿರುವ ಪಂಪು ಸೆಟ್‌ಗಳಿಗೆ ಪವರನ್ನು ಕೊಡುವುದಕ್ಕಾಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ದೇವನಹಳ್ಳಿಗೇ ಒಂದು ಪ್ರತ್ಯೇಕವಾದ ಒಲ್ಟೇಜ್ ರೆಗ್ಯುಲೇಟರ್ ಇರತಕ್ಕ ಆವಶ್ಯಕತೆಯಿದೆ. ಆದರೆ ಈಗ ದೇವನಹಳ್ಳಿಯಿಂದ ಸ್ವಲ್ಪ ಲೋಡನ್ನು ದೊಡ್ಡಬಳ್ಳಾಪುರಕ್ಕೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಇಲ್ಲಿ ಒಲ್ಟೇಜ್ ರೆಗ್ಯುಲೇಟರ್ ಏರ್ಪಟ್ಟ ತರುವಾಯ ಕರೆಂಟನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—25 ಸೈಕಲ್ಲಿನ ಒಲ್ಟೇಜ್ ಸಾಲದೆ ಹೆಚ್ಚಿನ ಒಲ್ಟೇಜ್ ಪವರ್ ಬೇಕೆಂದು ಬಂದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಇದನ್ನು 25 ಸೈಕಲ್ ನಿಂದ 50 ಸೈಕಲ್ ಒಲ್ಟೇಜಿಗೆ ಬೇಗ ಪರಿವರ್ತನೆ ಮಾಡಲು ನೂಕ್ಕ ಕಾರ್ಯ ಕ್ರಮಗಳನ್ನು ಕೈಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅಂದಾಜುಗಳು ತಯಾರಾಗಿವೆಯೆಂದು ಹೇಳಿರುವುದು ನಿಜವೇ ?

ಡಾ॥ ಆರ್. ನಾಗನಗೌಡ.—ಇರಬಹುದು. ಆದರೆ ಈಗ ನನ್ನಲ್ಲಿ ಆ ಸಮಾಚಾರಗಳೇನೂ ಇಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಅವುಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಮಂಜೂರು ಮಾಡುತ್ತೀರಿ ?

ಡಾ॥ ಆರ್. ನಾಗನಗೌಡ.—ಈಗಾಗಲೇ ನಾವು 25 ಸೈಕಲ್‌ಗಳ ಪವರನ್ನು 50 ಸೈಕಲ್‌ಗೆ ಪರಿವರ್ತನೆ ಮಾಡುವ ಭರಾಟೆಯಿಂದ ಕೆಲಸವನ್ನು ನಡೆಸುತ್ತಿದ್ದೇವೆ. ಅದನ್ನು ಬೇಗ ತಯಾರು ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇದಕ್ಕಾಗಿ ತಾವು ಏನಾದರೂ ಒಂದು ನಿರ್ದಿಷ್ಟವಾದ ಪ್ರೋಗ್ರಾಮನ್ನು ಹಾಕಿಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಹಾಕಿಕೊಂಡಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಎಷ್ಟು ದಿವಸಗಳಲ್ಲಿ ಈ ಕೆಲಸ ಪೂರ್ತಿಯಾಗಬಹುದು ?

ಡಾ॥ ಆರ್. ನಾಗನಗೌಡ.—ಬೇಗನೆ ಮಾಡಲಾಗುವುದು.

ಶ್ರೀ ಡಿ. ಎಂ. ಗೋವಿಂದರಾಜು.—ಇರಿಗೇಷ್ಟ್ ಪಂಪಿಂಗ್ ಸೆಟ್ಟಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ತಾವು ಅನುಸರಿಸುತ್ತಿರುವ ನೀತಿ ಯಾವುದು ?

ಡಾ॥ ಆರ್. ನಾಗನಗೌಡ.—ಒಂದು ಹಾರ್ಸ್ ಪವರಿಗೆ 1,000 ರೂಪಾಯಿ ಖರ್ಚು ಬೀಳಬಹುದು ಎಂದು ಲೆಕ್ಕ ಹಾಕಲಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಹೀಗೆ ತಾವು ಒಂದು ಸಾವಿರ ರೂಪಾಯಿಗಳನ್ನು ಕನಿಷ್ಠ ಪರಿಮಿತಿಯನ್ನಾಗಿ ನಿಗದಿ ಮಾಡಿರುವುದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಹಾಗೆ ನಾವು ಒಂದು ಸಾವಿರ ರೂಪಾಯಿಗಳನ್ನು ನಿರ್ಧರ ಮಾಡಿದ್ದಾಗ್ಗೂ ನಮಗೆ ಅದರಿಂದ 3 per cent ರಿಟರ್ನ್ಸ್ ಬರುವುದಿಲ್ಲ. ಆದರೆ ನಾವು ತೆಗೆದುಕೊಂಡಿರುವ ಸಾಲಕ್ಕೆ 4 per cent ಬಡ್ಡಿ ತೆರಬೇಕಾಗಿದೆಯಲ್ಲಾ ?

ಶ್ರೀ ಡಿ. ಎಂ. ಗೋವಿಂದರಾಜು.—ಈಗ ತಾವು ನಿರ್ಧರ ಮಾಡಿರತಕ್ಕ ಒಂದು ಸಾವಿರ ರೂಪಾಯಿಗಳಿಗೆ ಬದಲಾಗಿ 500 ರೂಪಾಯಿಗಳನ್ನು ಕ್ಲುಪ್ತಮಾಡುವುದು ಒಳ್ಳೆಯದಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು. ಆದರೆ ಅದರಿಂದ ಖೋತಾ ಬೀಳತಕ್ಕ ಮೊಬಲಗನ್ನು ಭರ್ತಿ ಮಾಡಿಕೊಳ್ಳಲು ನಾವು ಮತ್ತೆ ರೈತರಮೇಲೆ ಹೊಸ ತೆರಿಗೆ ಮತ್ತು ಟ್ಯಾಕ್ಸ್‌ಗಳನ್ನು ಹಾಕಬೇಕಾಗುತ್ತದೆಯಲ್ಲವೇ ?